ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು
ಆರೋಗ್ಯ ಸೌಧ, ಮಹಡಿ, ಮಾಗಡಿರಸ್ತೆ, ಬೆಂಗಳೂರು-560023

ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/86/2021-22 ದಿನಾಂಕ:01.06.2021

ಇವರಿಗೆ,

1. ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
2. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಕಛೇರಿ.

ಮಾನ್ಯರೆ,

ವಿಷಯ: ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ 45 ಮೇಲ್ಪಟ್ಟ ಎಲ್ಲಾ ಫಲಾನುಭವಿಗಳಿಗೆ ಕೋವಿಡ್ ಲಸಿಕಾಕರಣವನ್ನು ಆನ್‌ಲೈನ್ ಮತ್ತು ಆನ್‌ಸೈಟ್ ಮೂಲಕ ಆಯೋಜಿಸುವ ಕುರಿತು.

ಉಲ್ಲೇಖ: ನಿರ್ದೇಶನಾಲಯದ ಪತ್ರ ಸಂಖ್ಯೇ: ಎನ್‌ಹೆಚ್‌ಎಂ/ಡಿಡಿ/ಐಎಂಎಂ/86/2020-21 ದಿನಾಂಕ:28.04.2021

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋವಿಡ್-19 ಪ್ರಸರಣವನ್ನು ನಿಗ್ರಹಿಸಲು ರಾಜ್ಯದಲ್ಲಿ ಘೋಷಿಸಲಾದ ನಿರ್ಬಂಧ ಸಮಯದಲ್ಲಿ ಕೋವಿಡ್-19 ಲಸಿಕಾಕರಣವನ್ನು ನಡೆಸುವ ಕುರಿತು ಮಾರ್ಗಸೂಚಿ ನೀಡಲಾಗಿತ್ತು. ಸದರಿ ಪತ್ರದಲ್ಲಿ ನಗರ ಪ್ರದೇಶಗಳ ಸರ್ಕಾರಿ ಲಸಿಕಾ ಕೇಂದ್ರಗಳಲ್ಲಿ 45 ವರ್ಷ ಮೇಲ್ಪಟ್ಟ ಎಲ್ಲಾ ಫಲಾನುಭವಿಗಳು ಕೋವಿಡ್ -19 ಲಸಿಕಾಕರಣಕ್ಕಾಗಿ ಆನ್‌ಲೈನ್ ಮುಖಾಂತರ ನೋಂದಣಿ ಮಾಡಲು ತಿಳಿಸಲಾಗಿತ್ತು.

ಸದರಿ ಪತ್ರದ ಸೂಚನೆಯನ್ನು ಮಾರ್ಪಡಿಸಿ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 45 ವರ್ಷ ಮೇಲ್ಪಟ್ಟ ಅರ್ಹ ಫಲಾನುಭವಿಗಳು ಲಸಿಕಾಕರಣವನ್ನು ಆನ್‌ಲೈನ್ ಅಥವಾ ಆನ್‌ಸೈಟ್ ಮುಖಾಂತರ ನೋಂದಾಯಿಸಿ ಲಸಿಕೆ ಪಡೆಯಬಹುದಾಗಿರುತ್ತದೆ. ಈ ಕುರಿತು ಬಿಬಿಎಂಪಿ ವ್ಯಾಪ್ತಿಯಲ್ಲಿ ಮುಖ್ಯ ಆಯುಕ್ತರು, ಬಿಬಿಎಂಪಿ ಮತ್ತು ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅವಶ್ಯಕತೆಗೆ ಅನುಸಾರ ನಿರ್ಣಯ ಕೈಗೊಳ್ಳಬಹುದಾಗಿರುತ್ತದೆ ಎಂದು ಈ ಮೂಲಕ ತಿಳಿಸಲಾಗಿದೆ.

ಅರುಂಧತಿ

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಅಧಿಕಾರಿಗಳು,
2. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ.
3. ಎಲ್ಲಾ ಜಿಲ್ಲೆಯ ಆರ್.ಸಿ.ಹೆಚ್ ಅಧಿಕಾರಿಗಳು,
4. ಲಸಿಕಾಧಿಕಾರಿಗಳು (ಬಿ.ಬಿ.ಎಂ.ಪಿ)

ಮಾಹಿತಿಗಾಗಿ:

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.

3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ವಿಶೇಷ ಆಯುಕ್ತರು (ಆರೋಗ್ಯ), ಬಿಬಿಎಂಪಿ.
5. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
9. ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
10. ಉಪ ನಿರ್ದೇಶಕರು (ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
11. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು
1ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23

ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/86/2020-21 ದಿನಾಂಕ:28.04.2021

ಇವರಿಗೆ,

ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ)

ಮಾನ್ಯರೆ,

ವಿಷಯ: ಕೋವಿಡ್-19 ಪ್ರಸರಣವನ್ನು ನಿಗ್ರಹಿಸಲು ರಾಜ್ಯದಲ್ಲಿ ಘೋಷಿಸಲಾದ ನಿರ್ಬಂಧ ಸಮಯದಲ್ಲಿ ಕೋವಿಡ್-19 ಲಸಿಕಾಕರಣವನ್ನು ನಡೆಸುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೋವಿಡ್-19 ಪ್ರಸರಣವನ್ನು ನಿಗ್ರಹಿಸಲು ರಾಜ್ಯದಲ್ಲಿ ಘೋಷಿಸಲಾದ ಮಾರ್ಗಸೂಚಿ ದಿನಾಂಕ 28.04.2021 ರಾತ್ರಿ 9.00 ಗಂಟೆಯಿಂದ ದಿನಾಂಕ 12.05.2021 ರ ಬೆಳಗ್ಗೆ 6.00 ಗಂಟೆಯವರೆಗೆ ಚಾಲನೆಯಲ್ಲಿರುತ್ತದೆ. ಕೋವಿಡ್ ನಿಗ್ರಹಕ್ಕಾಗಿ ಲಸಿಕಾಕರಣ ಪ್ರಮುಖ ಕಾರ್ಯತಂತ್ರವಾಗಿದ್ದು ದಿನಾಂಕ 28.04.2021 ರಿಂದ ದಿನಾಂಕ 12.05.2021 ರ ನಿರ್ಬಂಧಿತ ಚಲನೆ ಸಮಯದಲ್ಲಿ 45 ವರ್ಷ ವಯಸ್ಸಿನ ಜನಸಂಖ್ಯೆಗೆ ಲಸಿಕಾಕರಣ ಮುಂದುವರೆಸಲು ರಾಜ್ಯವು ಉದ್ದೇಶಿಸಿದೆ. ಲಸಿಕಾಕರಣವನ್ನು ನಡೆಸಲು ಜಿಲ್ಲೆಗಳಲ್ಲಿ ಪಾಲಿಸಬೇಕಾದ ಮಾರ್ಗಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಸದರಿ ಅಧಿಕಾರಿಗಳು ಲಸಿಕಾಕರಣ ಸಮಯದಲ್ಲಿ ಸೂಚಿಸಿದ ಎಲ್ಲ ಮಾರ್ಗಸೂಚಿಯನ್ನು ಚಾಲ್ತಿಯಲ್ಲಿರುವುದನ್ನು ಖಾತರಿಪಡಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಅರುಂಧತಿ

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

ಸೂಕ್ತ ಕ್ರಮಕ್ಕಾಗಿ:

1. ಎಲ್ಲಾ ಜಿಲ್ಲೆಯ ಆರ್.ಸಿ.ಹೆಚ್ ಅಧಿಕಾರಿಗಳು,
2. ಲಸಿಕಾಧಿಕಾರಿಗಳು (ಬಿ.ಬಿ.ಎಂ.ಪಿ)

ಮಾಹಿತಿಗಾಗಿ:

1. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
4. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
5. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
6. ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
7. ಉಪ ನಿರ್ದೇಶಕರು(ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
8. ಕಛೇರಿ ಪ್ರತಿ.

**ಕೋವಿಡ್‌-19 ಪ್ರಸರಣವನ್ನು ನಿಗ್ರಹಿಸಲು ರಾಜ್ಯದಲ್ಲಿ ಘೋಷಿಸಲಾದ ಮಾರ್ಗಸೂಚಿ ದಿನಾಂಕ 28.04.2021 ರಾತ್ರಿ 9.00 ಗಂಟೆಯಿಂದ ದಿನಾಂಕ 12.05.2021 ರ ಬೆಳಗ್ಗೆ 6.00 ಗಂಟೆಯವರೆಗೆ ಚಾಲನೆಯಲ್ಲಿರುವ ನಿಮಿತ್ತ ರಾಜ್ಯದಲ್ಲಿ ಕೋವಿಡ್‌-19 ಲಸಿಕಾಕರಣ ಕೈಗೊಳ್ಳಲು ಮಾರ್ಗಸೂಚಿಗಳು**

ಕೋವಿಡ್‌ ನಿಗ್ರಹಕ್ಕಾಗಿ ಲಸಿಕಾಕರಣ ಪ್ರಮುಖ ಕಾರ್ಯತಂತ್ರವಾಗಿದ್ದು ದಿನಾಂಕ 28.04.2021 ರಾತ್ರಿ 9.00 ಗಂಟೆಯಿಂದ ದಿನಾಂಕ 12.05.2021 ರ ಬೆಳಗ್ಗೆ 6.00 ಗಂಟೆಯವರೆಗೆ 45 ವರ್ಷ ವಯಸ್ಸಿನ ಜನಸಂಖ್ಯೆಗೆ ಲಸಿಕಾಕರಣ ಮುಂದುವರೆಸಲು ರಾಜ್ಯವು ಉದ್ದೇಶಿಸಿದೆ.

- ನಗರ ಪ್ರದೇಶಗಳಲ್ಲಿ, ಆದ್ಯತೆಯ ವಯಸ್ಸಿನ (45+ವರ್ಷಗಳು) ಎಲ್ಲಾ ಫಲಾನುಭವಿಗಳು COVID-19 ಲಸಿಕಾಕರಣಕ್ಕಾಗಿ ಆನ್‌ಲೈನ್‌ ಮುಖಾಂತರ ನೋಂದಣಿ ಮಾಡಿಕೊಳ್ಳುವುದು ಮತ್ತು ಲಸಿಕಾ ಸತ್ರಗಳಿಗೆ ಬರುವಾಗ ಅಧಿಕೃತ ಗುರುತಿನ ಚೀಟಿ ಹಾಗೂ ಆನ್‌ಲೈನ್‌ ನೇಮಕಾತಿಯ ಸ್ಕ್ರೀನ್‌ಶಾಟ್‌ ಅಥವಾ ಪ್ರಿಂಟ್‌ಔಟ್‌ ತರುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಲಸಿಕಾ ಕೇಂದ್ರಗಳಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಉಪಕೇಂದ್ರಗಳು ಸೇರಿದಂತೆ ಎಲ್ಲಾ ಲಸಿಕಾ ಕೇಂದ್ರಗಳಲ್ಲಿ, ಲಸಿಕಾಕರಣಕ್ಕಾಗಿ Staggered ವಿಧಾನವನ್ನು ಅನುಸರಿಸಲಾಗುತ್ತದೆ. ಇದಕ್ಕೆ ಅನುಕೂಲವಾಗುವಂತೆ, ಜನಸಂದಣಿಯನ್ನು ತಪ್ಪಿಸಲು ಕ್ಷೇತ್ರಕಾರ್ಯಕರ್ತರು ಉಪಕೇಂದ್ರಗಳಿಗೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿರ್ದಿಷ್ಟ ಸಮಯದ ಸ್ಲಾಟ್‌ಗಳೊಂದಿಗೆ ಲಸಿಕೆ ನೀಡಲು ಅನುಕೂಲಕರ ಸಮಂಜಸ ಗುಂಪುಗಳನ್ನು (facilitated cohort group)ಸಜ್ಜುಗೊಳಿಸುತ್ತಾರೆ. ಫಲಾನುಭವಿಗಳನ್ನು ಸಜ್ಜುಗೊಳಿಸಲು ಗುರುತಿಸಲಾದ ಸ್ವಯಂ ಸೇವಕರಿಗೆ ದೃಢೀಕರಣಕ್ಕಾಗಿ ಗುರುತಿನ ಚೀಟಿ ಅಥವಾ ಪಾಸ್‌ ನೀಡಲಾಗುತ್ತದೆ.
- ಆಶಾ /ಅಂಗನವಾಡಿ ಕಾರ್ಯಕರ್ತರು / ಅಧಿಕೃತ ಸ್ವಯಂ ಸೇವಕರು ಲಸಿಕೆದಾರರಿಗೆ ಲಸಿಕಾಕರಣದ ಚೀಟಿ /ಪಾಸ್‌ ನೀಡುತ್ತಾರೆ.
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್‌ ಇಲಾಖೆಯು ಫಲಾನುಭವಿಗಳನ್ನು ವ್ಯಾಕ್ಸಿನೇಷನ್‌ ತಾಣಗಳಿಗೆ ಸಜ್ಜುಗೊಳಿಸಲು COVID-19 ಲಸಿಕೆ ವಾಹನಗಳ ವ್ಯವಸ್ಥೆಗೊಳಿಸಬೇಕು ಮತ್ತು ವಾಹನಗಳಿಗೆ ಮಾನ್ಯ ಪಾಸ್‌. ಸ್ಟಿಕ್ಕರ್‌ ಗಳನ್ನು ನೀಡಬೇಕು.
- ಆರೋಗ್ಯಕೇಂದ್ರಗಳ ಲಸಿಕೆ ನೀಡುವ ಸಾಮರ್ಥ್ಯದ ಆಧಾರದ ಮೇಲೆ ಯಾವುದೇ ಸಮಯದಲ್ಲಿ ಪ್ರತಿ ಸ್ಲಾಟ್‌ಗೆ ೫ ರಿಂದ ೧೦ ಅಥವಾ ಇನ್ನೂ ಹೆಚ್ಚಿನ ಫಲಾನುಭವಿಗಳಿಗೆ ಲಸಿಕೆ ಪಡೆಯಲು ಅವಕಾಶ ನೀಡಲಾಗುವುದು.
- ಪ್ರತಿ ಫಲಾನುಭವಿಯೊಂದಿಗೆ ಒಬ್ಬ ವ್ಯಕ್ತಿಗೆ ಮಾತ್ರ ಅವಕಾಶವಿರುತ್ತದೆ.
- ಎಲ್ಲಾCOVID-19 ವ್ಯಾಕ್ಸಿನೇಷನ್‌ ಕೇಂದ್ರಗಳು COVID-19 ಸೂಕ್ತನಡವಳಿಕೆಗಳಾದ ಮಾಸ್ಕ್‌ ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ ಹಾಗೂ ಕೈಗಳ ನೈರ್ಮಲ್ಯ ಇವುಗಳನ್ನು ಕಡ್ಡಾಯವಾಗಿ ಪಾಲಿಸಲಾಗುತ್ತದೆ.
- ಜಿಲ್ಲೆಗಳು ಲಸಿಕಾಕರಣಕ್ಕಾಗಿ ನಿರ್ದಿಷ್ಟ ಕ್ರಿಯಾ ಯೋಜನೆಯನ್ನು ತಯಾರಿಸಿ ಪೋಲೀಸ್‌ ಸಿಬ್ಬಂದಿಗೆ ನೀಡಿ ಲಸಿಕಾಕರಣಕ್ಕಾಗಿ ಜನರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಕೋರುವುದು.
- ಲಸಿಕಾಕರಣಕ್ಕೆ ಹೋಗುವ ಅರ್ಹ ಫಲಾನುಭವಿಗಳು ವಯಸ್ಸಿನ ದೃಢೀಕರಣಕ್ಕಾಗಿ ತಮ್ಮೊಂದಿಗೆ ಆಧಾರ್‌ಕಾರ್ಡ ಅನ್ನು ಕಡ್ಡಾಯವಾಗಿ ಒಯ್ಯುವುದು. ಇದರಿಂದ ಅರ್ಹರಲ್ಲದ ಜನರು ಅನವಶ್ಯಕವಾಗಿ ತಿರುಗಾಡುವುದನ್ನು ತಪ್ಪಿಸಬಹುದು..
- ಜನದಟ್ಟನೆಯನ್ನು ನಿಯಂತ್ರಿಸಲು ಮತ್ತು ಶಿಸ್ತು ಕಾಪಾಡಲು ಪೊಲೀಸ್ / ಎನ್‌ಎಸ್‌ಎಸ್ / ಎನ್‌ಸಿಸಿ ಅಧಿಕಾರಿಗಳನ್ನು ಕೋವಿಡ್‌ ಲಸಿಕಾ ಕೇಂದ್ರಕ್ಕೆ ನಿಯೋಜಿಸುವುದು.

- ಲಸಿಕೆಯ ಎರಡನೇ ಡೋಸ್ ಪಡೆಯಬೇಕಾದ ಎಲ್ಲಾ ಫಲಾನುಭವಿಗಳು ತಾವು ಮೊದಲನೇ ಡೋಸ್ ಪಡೆದ ಅಧಿಕೃತ ಮಾಹಿತಿಯನ್ನು ಹೊಂದಿರಬೇಕು

ಸದರಿ ನಿರ್ಬಂಧಿತ ಸಮಯದಲ್ಲಿ ಜಿಲ್ಲಾಡಳಿತವು ಕೋವಿಡ್-19 ಲಸಿಕಾಕರಣದ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಗಮವಾಗಿ ನಡೆಸಲು ಖಚಿತ ಪಡಿಸಿಕೊಳ್ಳಬೇಕು.

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

# Guidelines to conduct COVID-19 vaccination during lockdown

In view of lock down announced in state for covid containment and taking into consideration the surge in covid cases and covid vaccination being one of the important containment measures, State intends to continue vaccination of 45+ population.

- In urban areas, all beneficiaries of priority age group (45+ years) can book online appointment for COVID-19 vaccinationand reach the vaccination centre with their authentic photo I.D and screenshot/printout of online appointment.
- In rural areas, at all vaccination centres, including PHCs and Subcentres, staggered approach will be followed with time slots for vaccination. To facilitate this, field staff will mobilise facilitated cohort groups for vaccination to subcentres and PHCs with specific time slots to avoid crowding.Volunteers identified to mobilize beneficiaries will be issued ID or pass for authenticity.
- ASHA/AWW/ authorised volunteers will issue vaccination slot slips/pass to the beneficiaries.
- Rural development and Panchayati raj department should arrange vehicles "COVID-19 vaccine vehicles" to mobilize beneficiaries to vaccination sites. Vehicles should be issued valid pass, stickers.
- Only 5 to 10 people are allowed per siteat any point of time or more based on size of the health facilities.
- Only one accompanying person will be allowed.
- All COVID-19 vaccination centres will follow the COVID-19 appropriate behaviours i.e., wearing mask, social distancing and sanitization
- Districts to prepare specific plan and inform police authorities to facilitate smooth movement of peoplefor vaccination.
- Eligible beneficiaries should carry Aadhaar card compulsorily for age confirmation to avoid unnecessary movement of non-eligible beneficiaries.

Anselb